## ಕರ್ನಾಟಕ ಸರ್ಕಾರ
## ಸಮಾಜ ಕಲ್ಯಾಣ ಇಲಾಖೆ
## ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅನುಷ್ಠಾನದ ಬಗ್ಗೆ 2017-18 ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ವರದಿ

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013 ವಿಧೇಯಕವನ್ನು ಡಿಸೆಂಬರ್ 2013 ರಲ್ಲಿ ಜರುಗಿದ ಬೆಳಗಾವಿ ಅಧಿವೇಶನದಲ್ಲಿ ವಿಧಾನ ಮಂಡಲದಿಂದ ಅನುಮೋದನೆ ಪಡೆಯಲಾಗಿದೆ. ನಂತರ ಅಧಿಸೂಚನೆ ಮೂಲಕ ದಿನಾಂಕ 20.03.2014ರ ಅನ್ವಯ ಸದರಿ ಕಾಯ್ದೆ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆ ಜಾರಿಗೆ ಬಂದ ನಂತರ ಒಟ್ಟು ಅಭಿವೃದ್ಧಿ ಕಾರ್ಯಕ್ರಮಗಳಗೆ ನಿಗಧಿಪಡಿಸಿದ ಆಯವ್ಯಯದಿಂದ, ಪ.ಜಾತಿ ಮತ್ತು ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ SCSP/TSP ಯೋಜನೆಗಳಗೆ ಅನುದಾನ ನಿಗಧಿಪಡಿಸಲಾಗುತ್ತಿದೆ. 2011 ಜನಗಣತಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (6.10 ಕೋಟಿ) ಪ.ಜಾತಿ ಜನಸಂಖ್ಯೆ ಶೇ.17.15 (1.04 ಕೋಟಿ ಜನ) ಹಾಗೂ ಪ.ಪಂಗಡದ ಜನಸಂಖ್ಯೆ ಶೇ.6.95 (42.00 ಲಕ್ಷ) ಇರುತ್ತದೆ.

2017-18 ನೇ ಸಾಲಿನಿಂದ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಒಟ್ಟು ಆಯವ್ಯಯ ಎಂದು ಮಾರ್ಪಡಿಸಲಾಗಿದ್ದು, ಅದರಂತೆ ಮೇಲ್ಕಂಡ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ. ಸದರಿ ತಿದ್ದುಪಡಿಯನ್ನು ದಿನಾಂಕ:17-07-2017 ರಂದು ಅಧಿಸೂಚನೆ ಮೂಲಕ ಜಾರಿಗೆ ತರಲಾಗಿದೆ. ಸದರಿ ತಿದ್ದುಪಡಿಯಲ್ಲಿ ಒಟ್ಟು ಆಯವ್ಯಯದಲ್ಲಿ ವಿನಾಯಿತಿಸಲಾದ ವೆಚ್ಚ ಅಂದರೆ ಹಿಂದಿನ ಯೋಜನೇತರ ವೆಚ್ಚವನ್ನು ಹೊರತುಪಡಿಸಿ ಉಳಿದ ಆಯವ್ಯಯದ ಮೊತ್ತದಲ್ಲಿ ಜನಸಂಖ್ಯೆ ಆಧಾರದ ಮೇಲೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನ ಒದಗಿಸಲಾಗುತ್ತಿದೆ.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು 2017 ಇದನ್ನು ಅಧಿಸೂಚನೆ ದಿನಾಂಕ:08-11-2017 ರಂದು ಜಾರಿಗೆ ತರಲಾಗಿದೆ. ಸದರಿ ನಿಯಮಗಳಲ್ಲಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ವಿವರಿಸಲಾಗಿದೆ.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆಯ ಸೆಕ್ಷನ್ (5) ರ ಪ್ರಕಾರ ಸಮಾಜ ಕಲ್ಯಾಣ ಇಲಾಖೆ ನೋಡಲ್ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತದೆ. 2017-18 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಗೆ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳಗೆ ಆಯಾ ಇಲಾಖೆಗಳು ಕ್ರಿಯಾ ಯೋಜನೆಗಳನ್ನು ರೂಪಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿರುವ ನೋಡಲ್ ಏಜೆನ್ಸಿಗೆ ಸಲ್ಲಿಸಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಅಂತಿಮವಾಗಿ ದಿನಾಂಕ:02-06-2017 ರಂದು ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. ಸದರಿ ಅನುಮೋದನೆಯಂತೆ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳು ಅನುಷ್ಠಾನಗೊಳಸಿರುತ್ತಾರೆ.

### 2017-18 ನೇ ಸಾಲಿನ SCSP/ TSP ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ಸಾರಾಂಶ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ನಿಗದಿಪಡಿಸಿದ ಅನುದಾನ | ಬಿಡುಗಡೆ | ಖರ್ಚು | ನಿಗದಿಗೆ ಶೇಕಡ | ಬಿಡುಗಡೆಗೆ ಶೇಕಡ |
|---|---|---|---|---|---|
| SCSP | 19647.58 | 19307.64 | 18503.43 | 94 | 96 |
| TSP | 8314.76 | 8124.25 | 7700.21 | 93 | 95 |
| **ಒಟ್ಟು** | **27962.34** | **27431.89** | **26203.64** | **94** | **96** |

ಮೇಲ್ಕಂಡಂತೆ 2017-18 ನೇ ಸಾಲಿನಲ್ಲಿ ಒಟ್ಟಾರೆ ಶೇ.95 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

## 2017-18 ನೇ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಒದಗಿಸಿದ ಹಾಗೂ ವೆಚ್ಚಮಾಡಿದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಇಲಾಖೆಗಳು | SCSP | | | | TSP | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ |
| 1 | ಕೃಷಿ | 509.65 | 481.56 | 461.78 | 91 | 239.85 | 230.04 | 200.61 | 84 |
| 2 | ತೋಟಗಾರಿಕೆ | 139.07 | 139.07 | 124.29 | 89 | 60.70 | 60.70 | 56.82 | 94 |
| 3 | ರೇಷ್ಮೆ | 24.56 | 24.56 | 24.10 | 98 | 11.10 | 11.10 | 9.02 | 81 |
| 4 | ಪಶುಸಂಗೋಪನೆ | 140.14 | 129.94 | 123.13 | 86 | 66.21 | 63.02 | 58.99 | 89 |
| 5 | ಮೀನುಗಾರಿಕೆ | 12.53 | 12.53 | 12.50 | 100 | 7.91 | 7.91 | 7.90 | 100 |
| 6 | ಸಾರಿಗೆ | 224.83 | 224.83 | 221.50 | 99 | 107.82 | 107.82 | 103.54 | 96 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 2212.25 | 2211.71 | 2211.71 | 100 | 1233.95 | 1179.56 | 1179.56 | 96 |
| 8 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 29.58 | 29.58 | 29.52 | 100 | 36.87 | 36.85 | 36.81 | 100 |
| 9 | ಸಹಕಾರ | 701.08 | 690.37 | 690.35 | 98 | 362.28 | 353.00 | 353.00 | 97 |
| 10 | ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | 4864.21 | 4816.71 | 4634.40 | 95 | 1588.53 | 1588.53 | 1502.43 | 96 |
| 11 | ಹಿಂದುಳಿದ ವರ್ಗಗಳ ಕಲ್ಯಾಣ | 45.01 | 45.01 | 44.57 | 99 | 80.00 | 80.00 | 79.12 | 99 |
| 12 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 768.49 | 719.16 | 672.26 | 87 | 334.77 | 311.86 | 288.42 | 86 |
| 13 | ವಾರ್ತಾ | 11.27 | 11.27 | 11.23 | 100 | 2.76 | 2.76 | 2.19 | 79 |
| 14 | ಪ್ರವಾಸೋದ್ಯಮ | 20.18 | 20.18 | 20.17 | 100 | 8.41 | 8.41 | 8.40 | 100 |
| 15 | ಯುವಜನ ಸೇವೆಗಳು | 33.26 | 33.26 | 9.50 | 29 | 13.81 | 13.81 | 4.35 | 31 |
| 16 | ಕಂದಾಯ | 770.08 | 770.08 | 761.84 | 99 | 413.13 | 413.13 | 411.78 | 100 |
| 17 | ಐ.ಟಿ – ಬಿ.ಟಿ | 8.41 | 8.41 | 8.41 | 100 | 3.36 | 3.36 | 3..36 | 100 |
| 18 | ವಸತಿ | 1746.42 | 1746.42 | 1640.52 | 94 | 587.41 | 587.41 | 523.28 | 89 |
| 19 | ಉನ್ನತ ಶಿಕ್ಷಣ | 146.41 | 146.41 | 109.74 | 75 | 50.32 | 50.32 | 35.10 | 70 |
| 20 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 705.31 | 705.31 | 653.08 | 90 | 270.48 | 270.48 | 249.91 | 91 |
| 21 | ಕೈಮಗ್ಗ ಮತ್ತು ಜವಳಿ | 38.47 | 38.47 | 38.47 | 100 | 15.81 | 15.81 | 15.81 | 100 |
| 22 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 147.87 | 147.87 | 146.25 | 99 | 43.43 | 43.43 | 43.14 | 99 |
| 23 | ಸಣ್ಣ ಕೈಗಾರಿಕೆ | 8.83 | 8.83 | 7.98 | 90 | 3.77 | 3.77 | 3.28 | 87 |

| ಕ್ರ. ಸಂ | ಇಲಾಖೆಗಳು | SCSP | | | | TSP | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ |
| 24 | ನಗರಾಭಿವೃದ್ಧಿ | 806.02 | 799.02 | 715.08 | 89 | 348.25 | 346.73 | 308.57 | 89 |
| 25 | ಆಹಾರ ಮತ್ತು ನಾಗರಿಕ ಸರಬರಾಜು | 589.69 | 456.91 | 432.68 | 73 | 264.88 | 203.15 | 191.87 | 72 |
| 26 | ಲೋಕೋಪಯೋಗಿ | 884.07 | 830.78 | 790.15 | 89 | 419.49 | 413.26 | 395.29 | 94 |
| 27 | ಭಾರಿ ನೀರಾವರಿ | 1908.93 | 1908.93 | 1908.93 | 100 | 801.99 | 801.99 | 801.99 | 100 |
| 28 | ಸಣ್ಣ ನೀರಾವರಿ | 263.82 | 263.32 | 260.90 | 99 | 116.10 | 115.20 | 108.84 | 94 |
| 29 | ವೈದ್ಯಕೀಯ ಶಿಕ್ಷಣ | 64.39 | 64.39 | 64.39 | 100 | 12.62 | 12.62 | 12.62 | 100 |
| 30 | ಆರೋಗ್ಯ | 653.61 | 653.61 | 575.20 | 88 | 264.57 | 264.57 | 222.56 | 84 |
| 31 | ಕಾರ್ಮಿಕ | 26.92 | 26.92 | 26.92 | 100 | 20.72 | 20.72 | 20.72 | 100 |
| 32 | ಕೌಶಲ್ಯಾಭಿವೃದ್ಧಿ & ತರಬೇತಿ | 143.24 | 143.24 | 80.46 | 56 | 96.48 | 75.95 | 36.93 | 38 |
| 33 | ಇಂಧನ | 661.89 | 661.89 | 657.53 | 99 | 269.89 | 269.89 | 268.12 | 99 |
| 34 | ಕನ್ನಡ ಮತ್ತು ಸಂಸ್ಕೃತಿ | 39.63 | 39.63 | 37.13 | 94 | 16.09 | 16.09 | 15.49 | 96 |
| 35 | ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 296.18 | 296.18 | 295.48 | 100 | 140.42 | 140.42 | 139.81 | 100 |
| 36 | ಕಾನೂನು | 1.28 | 1.28 | 1.28 | 100 | 0.58 | 0.58 | 0.58 | 100 |
| | **ಒಟ್ಟು** | **19647.58** | **19307.64** | **18503.43** | 94 | **8314.76** | **8124.25** | **7700.21** | 93 |

| ಕ್ರ.ಸಂ | ವಿವರ | ಇಲಾಖೆಗಳು |
|---|---|---|
| 1 | ಶೇ.100 ರಷ್ಟು ವೆಚ್ಚ ಮಾಡಿದ ಇಲಾಖೆಗಳು – 12 | ಮೀನುಗಾರಿಕೆ, ಆರ್.ಡಿ.ಪಿ.ಆರ್, ಅರಣ್ಯ, ವಾರ್ತಾ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಕೈಮಗ್ಗ ಮತ್ತು ಜವಳಿ, ಭಾರಿ ನೀರಾವರಿ, ವೈದ್ಯಕೀಯ ಶಿಕ್ಷಣ,ಕಾರ್ಮಿಕ, ಯೋಜನೆ, ಕಾನೂನು |
| 2 | ಶೇ.70 ರಿಂದ ಶೇ.99 ರವರೆಗೆ ವೆಚ್ಚ ಮಾಡಿದ ಇಲಾಖೆಗಳು–22 | ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಸಾರಿಗೆ, ಸಹಕಾರ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಂದಾಯ, ವಸತಿ, ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಭಾರಿ ಮತ್ತು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ, ನಗರಾಭಿವೃದ್ದಿ, ಆಹಾರ ಮತ್ತು ನಾಗರಿಕ ಸರಬರಾಜು, ಲೋಕೋಪಯೋಗಿ, ಸಣ್ಣ ನೀರಾವರಿ, ಆರೋಗ್ಯ, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ |
| 3 | ಶೇ.50 ರಿಂದ ಶೇ.70 ರವರೆಗೆ ವೆಚ್ಚ ಮಾಡಿದ ಇಲಾಖೆಗಳು–1 | ಕೌಶಲ್ಯಾಭಿವೃದ್ಧಿ & ತರಬೇತಿ ಇಲಾಖೆ |
| 3 | ಶೇ.50 ಕ್ಕಿಂತ ಕಡಿಮೆ ವೆಚ್ಚ ಮಾಡಿದ ಇಲಾಖೆಗಳು– 1 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ |

ಉನ್ನತ ಶಿಕ್ಷಣ ಇಲಾಖೆಯಲ್ಲಿ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ (RUSA) ಯೋಜನೆಯಡಿಯಲ್ಲಿ ರೂ.34.00 ಕೋಟಿ ಬಿಡುಗಡೆಯಾಗಿರುವುದಿಲ್ಲ.

ಮೇಲ್ಕಂಡ ಕಾಯ್ದೆಯಡಿಯಲ್ಲಿ SCSP/TSP ಯೋಜನೆಯಡಿಯಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಇರುವ ಮೊತ್ತವನ್ನು ಆಡಿಟ್ ಮಾಡಿಸಿದ ನಂತರ ಮುಂದಿನ ಆರ್ಥಿಕ ವರ್ಷದ ತದನಂತರದಲ್ಲಿ ಬರುವ ಆರ್ಥಿಕ ವರ್ಷದಲ್ಲಿ ನೀಡಲಾಗುತ್ತದೆ. ಅದರಂತೆ 2015-16 ನೇ ಸಾಲಿನಲ್ಲಿ ಆಡಿಟ್ ಆದ ನಂತರ ನಿಖರ ವೆಚ್ಚವಾಗದೇ ಇರುವ ಮೊತ್ತ ರೂ.751.88 ಕೋಟಿಗಳನ್ನು 2017-18 ನೇ ಸಾಲಿನ ಆಯವ್ಯಯದಲ್ಲಿ ಆಯಾ ಇಲಾಖೆಗಳಿಗೆ ಮರು ಹಂಚಿಕೆ ಮಾಡಲಾಗಿದೆ.

## 2017-18 ನೇ ಸಾಲಿನಲ್ಲಿ ರಾಜ್ಯ ಪರಿಷತ್ತಿನ ನಿರ್ಣಯದಂತೆ ಇಲಾಖಾವಾರು ಅನುಷ್ಠಾನ ಮಾಡಿರುವ

### ಕೃಷಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 509.65 | 461.78 | 91 |
| ಟಿ.ಎಸ್.ಪಿ | 239.85 | 200.61 | 84 |

- ಒಟ್ಟಾರೆ ಕೃಷಿ ಇಲಾಖೆಯಲ್ಲಿ ಶೇ.88 ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಬಿತ್ತನೆ ಬೀಜ ವಿತರಣೆ, ಕೃಷಿ ಉಪಕರಣಗಳು/ಸಾವಯವ/ಬಯೋ ಗೊಬ್ಬರ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳು/ ಗ್ರೀನ್‌ಹೌಸ್, ಪಾಲಿಹೌಸ್ ಇತ್ಯಾದಿ ಸೌಲಭ್ಯಗಳನ್ನು ಶೇಕಡ ೯೦ರ ಸಹಾಯಧನದಲ್ಲಿ ನೀಡಲಾಗಿದೆ.
- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಟ್ರಾಕ್ಟರ್ ಖರೀದಿಗೆ ರೂ. 2.00 ಲಕ್ಷ ಸಹಾಯಧನ ನೀಡಲಾಗಿದೆ.
- ಕೃಷಿ ಭಾಗ್ಯ ಯೋಜನೆ - ಮಳೆ ಆಧಾರಿತ ಜಮೀನುಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಕಾರ್ಯಕ್ರಮಗಳಿಗೆ ರೂ.165.43 ಕೋಟಿ ವೆಚ್ಚ ಮಾಡಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ – ರೂ.110.00 ಕೋಟಿ ವೆಚ್ಚ ಮಾಡಲಾಗಿದೆ.
- ರಾಷ್ಟ್ರೀಯ ಕೃಷಿವಿಕಾಸ ಯೋಜನೆಯಡಿ ವಿವಿಧ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.56.00 ಕೋಟಿ ವೆಚ್ಚ ಮಾಡಲಾಗಿದೆ.
- ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪುಸ್ತಕಗಳು, ಶುಲ್ಕ ಮರುಪಾವತಿ ಮತ್ತು ವಿದ್ಯಾರ್ಥಿವೇತನ ಸೌಲಭ್ಯ ನೀಡಲಾಗಿದೆ.
- ಜಲಾನಯನ ಇಲಾಖೆಯಿಂದ ಜಲಾನಯನ ಅಭಿವೃದ್ಧಿ ಯೋಜನೆಯಡಿ ನಿರ್ದಿಷ್ಟ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನುಗಳ ಅಭಿವೃದ್ಧಿ ಮಾಡಿ, ಮಣ್ಣಿನ ತೇವಾಂಶ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿದೆ.
- ಉಚಿತವಾಗಿ ಎಸ್.ಸಿ./ಎಸ್.ಟಿ. ರೈತರಿಗೆ ತರಬೇತಿ ಮತ್ತು ಪ್ರಾಯೋಗಿಕ ತಾಕುಗಳಲ್ಲಿ ಬೆಳೆ ಬೆಳೆಯುವ ಸೌಲಭ್ಯ ನೀಡಲಾಗಿದೆ.
- ಗ್ರಾಮೀಣ ಕೃಷಿ ಯಂತ್ರೋಪಕರಣ ಸೇವಾ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.75 ರಷ್ಟು ಸಹಾಯಧನ ನೀಡಲಾಗಿದೆ.
- ಕೃಷಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 9.61 ಲಕ್ಷ ಪರಿಶಿಷ್ಟ ಜಾತಿ ಮತ್ತು 5.35 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ತೋಟಗಾರಿಕೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 139.07 | 124.29 | 89 |
| ಟಿ.ಎಸ್.ಪಿ | 60.70 | 56.82 | 94 |

- ಒಟ್ಟು ಶೇ.92 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.28.35 ಕೋಟಿ ವೆಚ್ಚ ಭರಿಸಿದ್ದು, ತೋಟಗಾರಿಕೆ ಕಾರ್ಯಕ್ರಮಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿ ರೂ.56.00 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಹನಿ ಮತ್ತು ತುಂತರು ನೀರಾವರಿ ಘಟಕಗಳನ್ನು ಅಳವಡಿಸಲಾಗಿದೆ.
- ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ರೂ.34.08 ಕೋಟಿ ವೆಚ್ಚದಲ್ಲಿ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ ಘಟಕ, ನೀರು ಸಂಗ್ರಹಣಾ ಘಟಕ ಮತ್ತು ಇತರೆ ಘಟಕಗಳಡಿ ಶೇ.90ರಷ್ಟು ಸಹಾಯಧನ ನೀಡಲಾಗಿದೆ.
- ಫಲಾನುಭವಿಗಳಿಗೆ ಬೀಜ ವಿತರಣೆ ಹಂತದಿಂದ ಮಾರುಕಟ್ಟೆ ಹಂತದವರೆಗೆ ಬೆಂಬಲ ನೀಡಲಾಗಿದೆ.
- ತೋಟಗಾರಿಕೆ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ತೋಟಗಾರಿಕೆ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 41305 ಪರಿಶಿಷ್ಟ ಜಾತಿ ಮತ್ತು 21125 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ರೇಷ್ಮೆ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 24.56 | 24.10 | 100 |
| ಟಿ.ಎಸ್.ಪಿ | 11.10 | 9.02 | 81 |

- ಒಟ್ಟು ಶೇ.90 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಿಪ್ಪನೇರಳೆ ಬೆಳೆಸುವ ರೈತರಿಗೆ ಸಹಾಯಧನ ನೀಡಲಾಗಿದೆ.
- ಹುಳು ಸಾಕಣೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.
- ಚಾಕಿ ತೋಟ ನಿರ್ವಹಣೆ ಹಾಗೂ ರೇಷ್ಮೆ ಗೂಡಿನ ದರ ಕುಸಿತವಾದಾಗ ರಕ್ಷಣಾತ್ಮಕ ದರ ನೀಡಲಾಗಿದೆ.
- ರೀಲಿಂಗ್ ಘಟಕಗಳಿಗೆ ಸಹಾಯಧನ ನೀಡಲಾಗಿದೆ.

ರೇಷ್ಮೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 4288 ಪರಿಶಿಷ್ಟ ಜಾತಿ ಮತ್ತು 2777 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಪಶು ಸಂಗೋಪನಾ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 140.14 | 123.13 | 86 |
| ಟಿ.ಎಸ್.ಪಿ | 66.21 | 58.99 | 89 |

- ಒಟ್ಟು ಶೇ.87 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಕೆ ಮಾಡುವ ಹಾಲಿಗೆ ಕೆ.ಎಂ.ಎಫ್. ಮೂಲಕ ಪ್ರತಿ ಲೀಟರ್‌ಗೆ ರೂ. 5 ಪ್ರೋತ್ಸಾಹಧನ ನೀಡಲು ರೂ.139.00 ಕೋಟಿ ವೆಚ್ಚ ಭರಿಸಲಾಗಿದೆ.
- ಹೈನುಗಾರಿಕೆ ಯೋಜನೆಯಡಿ ಎರಡು ಹಸು/ ಎಮ್ಮೆ ಖರೀದಿಸಲು ಶೇ.50 ರಷ್ಟು ಸಹಾಯಧನ ನೀಡಲಾಗಿದೆ ಮತ್ತು ವಿಮಾ ಸೌಕರ್ಯ ಕಲ್ಪಿಸಲಾಗಿದೆ.
- ಕುರಿ/ ಮೇಕೆ/ಹಂದಿ ಸಾಕಾಣಿಕೆಗೆ ಶೇ. 90 ರಷ್ಟು ಸಹಾಯಧನ ನೀಡಲಾಗಿದೆ.
- ಜಾನುವಾರುಗಳಿಗೆ ರೋಗನಿರೋಧಕ ಲಸಿಕೆಗಳು ಹಾಗೂ ಪಶು ವೈದ್ಯಕೀಯ ವೆಚ್ಚ ಭರಿಸಲಾಗಿದೆ.
- ಬೀದರ್ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ಪಶು ವೈದ್ಯಕೀಯ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ.
- ಜಾನುವಾರಗಳ ಆಕಸ್ಮಿಕ ಮರಣಕ್ಕೆ ತುತ್ತಾದಲ್ಲಿ ರೂ.10000/- ಪರಿಹಾರ ನೀಡಲಾಗಿದೆ.
- ಕುರಿ ಮೇಕೆ ಆಕಸ್ಮಿಕ ಮರಣಕ್ಕೆ ತುತ್ತಾದಲ್ಲಿ ರೂ.5000/- ಪರಿಹಾರ ನೀಡಲಾಗಿದೆ.
- ಜಾನುವಾರುಗಳ ವಿಮಾ ಪ್ರೀಮಿಯಂ ಪಾವತಿಸಲಾಗಿದೆ.

ಪಶುಸಂಗೋಪನೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 87283 ಲಕ್ಷ ಪರಿಶಿಷ್ಟ ಜಾತಿ ಮತ್ತು 46934 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮೀನುಗಾರಿಕೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 12.53 | 12.50 | 100 |
| ಟಿ.ಎಸ್.ಪಿ | 7.91 | 7.90 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀನುಗಾರರಿಗೆ ಮನೆ ನಿರ್ಮಾಣ ಮಾಡಲು ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರೂ.1.75 ಲಕ್ಷ ಮತ್ತು ನಗರಪ್ರದೇಶದಲ್ಲಿ ರೂ.2.00 ಲಕ್ಷ ಘಟಕ ಸಹಾಯಧನ ನೀಡಲಾಗಿದೆ.
- ಜಲಾಶಯದಲ್ಲಿ ಮೀನು ಮರಿ ಬಿತ್ತನೆ, ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ, ಮೀನುಕೊಳ ನಿರ್ಮಾಣ, ಮೀನು ಸಾಕಾಣಿಕೆ ಸಹಾಯಧನ ಮೀನುಮರಿ ಪಾಲನೆಗೆ ಮೂಲಭೂತ ಸೌಲಭ್ಯ, ಮೀನು ಸಾಗಾಣಿಕೆ ವಾಹನ ಖರೀದಿಗೆ ಸಹಾಯಧನ, ಮೀನುಗಾರಿಕೆ ಸಲಕರಣೆ ಖರೀದಿಗೆ ಶೇ.80 ರಿಂದ 100ರಷ್ಟು ಸಹಾಯಧನ ನೀಡಲಾಗಿದೆ.

- ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿಸಲಾಗಿದೆ.
- ಮೀನುಗಾರರಿಗೆ ಮೀನು ಮಾರಾಟ ಸಲುವಾಗಿ ವಾಹನ ಸೌಲಭ್ಯ ಶೇ.80 ರಷ್ಟು, ಗರಿಷ್ಠ ರೂ.4.40 ಲಕ್ಷ ಸಹಾಯಧನ ನೀಡಲಾಗಿದೆ.

ಮೀನುಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 2159 ಪರಿಶಿಷ್ಟ ಜಾತಿ ಮತ್ತು 1275 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಾರಿಗೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 224.83 | 221.56 | 99 |
| ಟಿ.ಎಸ್.ಪಿ | 107.82 | 103.54 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಮೀಸಲು ಕ್ಷೇತ್ರಗಳಲ್ಲಿ ಬಸ್‌ತಂಗುದಾಣ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.
- 4.72 ಲಕ್ಷ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಕರ್ಯ ಕಲ್ಪಿಸಲಾಗಿದೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 2212.25 | 2211.71 | 100 |
| ಟಿ.ಎಸ್.ಪಿ | 1233.95 | 1179.56 | 98 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪ.ಪಂಗಡದ ಕುಟುಂಬಗಳಿಗೆ ಸ್ವಚ್ಛ ಭಾರತ ಅಭಿಯಾನದಡಿ 3.21 ಲಕ್ಷ ಪರಿಶಿಷ್ಟ ಜಾತಿ ಕುಂಟುಬಗಳಿಗೆ ಮತ್ತು 1.73 ಲಕ್ಷ ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಸಹಾಯಧನ, ಸ್ನಾನಗೃಹ ನಿರ್ಮಿಸಲು ರೂ.5000/- ಗಳನ್ನು ಹೆಚ್ಚುವರಿಯಾಗಿ ನೀಡಲಾಗಿದ್ದು, ರೂ.756.16 ಕೋಟಿ ವೆಚ್ಚ ಭರಿಸಲಾಗಿದೆ.
- ಸುವರ್ಣ ಗ್ರಾಮ/ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ರೂ.219.04 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಸಿ.ಸಿ.ರಸ್ತೆ, ಚರಂಡಿ ನಿರ್ಮಿಸಲಾಗಿದೆ.
- ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ರೂ.888.94 ಕೋಟಿ ವೆಚ್ಚದಲ್ಲಿ 157 ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ರೂ.913.65 ಕೋಟಿ ವೆಚ್ಚ ಮಾಡಲಾಗಿದೆ.
- ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ರೂ.605.42 ಕೋಟಿ ವೆಚ್ಚದಲ್ಲಿ 934 ಸಂಪರ್ಕ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

## ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 29.58 | 29.52 | 100 |
| ಟಿ.ಎಸ್.ಪಿ | 36.85 | 36.81 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪಂಗಡದ ಅರಣ್ಯ ವಾಸಿಗಳಿಗೆ ಎಲ್‌ಪಿಜಿ ಸ್ಟೌವ್, ರೆಗ್ಯುಲೇಟರ್ ಮತ್ತು ಸಿಲಿಂಡರ್ ಸರಬರಾಜು ಮಾಡಲಾಗಿದೆ.
- ಜೇನುಸಾಕಾಣಿಕೆ ಪೆಟ್ಟಿಗೆ ವಿತರಣೆ ಮತ್ತು ತರಬೇತಿ ನೀಡಲಾಗಿದೆ.
- ರಸ್ತೆ ಬದಿಯಲ್ಲಿ ನಡುತೋಪು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 54150 ಪರಿಶಿಷ್ಟ ಜಾತಿ ಮತ್ತು 69881 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಹಕಾರ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 701.08 | 690.35 | 99 |
| ಟಿ.ಎಸ್.ಪಿ | 362.28 | 353.00 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರು ಪಡೆದ ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ಕಾರ್ಯಕ್ರಮದಡಿ ರೂ.86.32 ಕೋಟಿ ವೆಚ್ಚದಲ್ಲಿ 3.23 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಣಿ ಯೋಜನೆಯಡಿ 35233 ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರನ್ನು ಸದಸ್ಯರನ್ನಾಗಿ ನೋಂದಾಯಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ "ಯಶಸ್ವಿನಿ"ಯೋಜನೆಯಡಿ ಗ್ರಾಮೀಣ ರೈತರು ರೂ.50/- ನಗರ ಪ್ರದೇಶಗಳ ರೈತರಿಗೆ ರೂ.110/- ವಂತಿಕೆ ಭರಿಸಿ ಆರೋಗ್ಯ ಸೌಲಭ್ಯ ಕಲ್ಪಿಸಲಾಗಿದೆ. ಸದರಿ ಯೋಜನೆಯಡಿ 5047 ಪ.ಜಾತಿ ಹಾಗೂ 2652 ಪ.ಪಂಗಡದ ಸದಸ್ಯರಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಪರಿಶಿಷ್ಟ ಪಂಗಡ ಉಪಯೋಜನೆಯಡಿ ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಆರ್ಥಿಕ ಸೌಲಭ್ಯ ನೀಡಲಾಗುತ್ತದೆ. ಸದರಿ ಯೋಜನೆಯಡಿ 9 ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ರೂ.1.00 ಕೋಟಿ ಧನಸಹಾಯ ನೀಡಲಾಗಿದೆ.
- ಪಶು ಆಹಾರ ಮತ್ತು ನಿರ್ವಹಣೆಗಾಗಿ ರೂ.50000/- ವರೆಗೆ ಸಹಕಾರಿ ಬ್ಯಾಂಕ್‌ಗಳಿಂದ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ.

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ 1.54 ಲಕ್ಷ ರೈತರಿಗೆ ನೀಡಿದ ರೂ.908.00 ಕೋಟಿ ಸಾಲ ಮನ್ನಾ ಮಾಡಲಾಗಿದೆ.

ಸಹಕಾರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ 3.25 ಲಕ್ಷ ಮತ್ತು 2.04 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 45.01 | 44.57 | 99 |
| ಟಿ.ಎಸ್.ಪಿ | 80.00 | 79.12 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಶೇ.25 ರಷ್ಟು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಇರುವ ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ನೀಡಲಾಗಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 768.49 | 672.26 | 87 |
| ಟಿ.ಎಸ್.ಪಿ | 334.77 | 288.42 | 86 |

- ಒಟ್ಟು ಶೇ.86 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 29772 ಸ್ವಸಹಾಯ ಸ್ತ್ರೀ ಶಕ್ತಿ ಗುಂಪುಗಳಿಗೆ ರೂ.16.00 ಕೋಟಿ ವೆಚ್ಚದಲ್ಲಿ ತಲಾ ರೂ.5000/- ಸುತ್ತು ನಿಧಿ ನೀಡಲಾಗಿದೆ.
- ಉದ್ಯೋಗಿನಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ರೂ.50000/- ಸಹಾಯಧನ ಒದಗಿಸಲಾಗಿದೆ.
- ಚೇತನ ಕಾರ್ಯಕ್ರಮದಡಿ ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗದ ಮೂಲಕ ಸ್ವಾವಲಂಬನೆಯ ಜೀವನ ನಡೆಸಲು ಅನುಕೂಲವಾಗುವಂತೆ ರೂ. 50000/- ಧನಸಹಾಯ ನೀಡಲಾಗಿದೆ.
- ಕೆ.ಎಸ್.ಎಫ್.ಸಿ.ಯಿಂದ ಸಾಲ ಪಡೆದ ಮಹಿಳಾ ಉದ್ದಿಮೆದಾರರಿಗೆ ಶೇ.4ರ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. ಉಳಿದ ಶೇ.10 ರಷ್ಟು ಬಡ್ಡಿಯನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಭರಿಸುತ್ತದೆ (ಸಾಲ ಮೊತ್ತ ರೂ.5.00 ಲಕ್ಷದಿಂದ ರೂ.50.00 ಲಕ್ಷದವರೆಗೆ)

- ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ 3.61 ಲಕ್ಷ ಅಂಗವಿಕಲ ಫಲಾನುಭವಿಗಳಿಗೆ ರೂ.324.51 ಕೋಟಿ ವೆಚ್ಚದಲ್ಲಿ ಮಾಸಿಕ ಪಿಂಚಣಿ ನೀಡಲಾಗಿದೆ.
- ಅಂಗವಿಕಲರಿಗೆ ವಿದ್ಯಾರ್ಥಿ ವೇತನ, ಸಲಕರಣೆ ವಿತರಣೆ, ಸ್ವಯಂ ಸೇವಾ ಸಂಸ್ಥೆಯ ಮೂಲಕ ತರಬೇತಿ, ನಿರುದ್ಯೋಗ ಭತ್ಯೆ ಹಾಗೂ ದೈಹಿಕ ಮತ್ತು ಮಾನಸಿಕವಾಗಿ ಸವಾಲುಗಳಿಗೆ ಒಳಗಾದವರಿಗೆ ಧನ ಸಹಾಯ ನೀಡಲಾಗಿದೆ.
- ಭಾಗ್ಯಲಕ್ಷ್ಮಿ ಯೋಜನೆಯಡಿ ರೂ.61.43 ಕೋಟಿ ವೆಚ್ಚದಲ್ಲಿ ಪ.ಜಾತಿಯ 21903 ಹಾಗೂ ಪ.ಪಂಗಡದ 10027 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ "ಬಾಲ ಸಂಜೀವಿನಿ" ಯೋಜನೆಯಡಿಯಲ್ಲಿ ಔಷಧೋಪಚಾರ, ಚಿಕಿತ್ಸೆ, ಪೌಷ್ಠಿಕ ಆಹಾರಕ್ಕಾಗಿ ಪ.ಜಾತಿಯ 3919 ಹಾಗೂ ಪ.ಪಂಗಡದ 1991 ಮಕ್ಕಳಿಗೆ ಸೌಲಭ್ಯ ನೀಡಲಾಗಿದೆ.
- ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರ ಪುನರ್ವಸತಿ ಕಾರ್ಯಕ್ರಮದಡಿ 29021 ದೇವದಾಸಿಯರಿಗೆ ಮಾಸಿಕ ರೂ. 1500 ಮಾಸಾಶನ ನೀಡಲು ರೂ.51.77 ಕೋಟಿ ವೆಚ್ಚ ಭರಿಸಲಾಗಿದೆ.
- ದೇವದಾಸಿಯರ ವಸತಿ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಘಟಕ ವೆಚ್ಚ ರೂ.1.75 ಲಕ್ಷ ಮತ್ತು ನಗರ ಪ್ರದೇಶಗಳಲ್ಲಿ 2.00 ಲಕ್ಷ ನೀಡಲಾಗುತ್ತಿದೆ. ಒಟ್ಟು 1295 ಮನೆಗಳಿಗೆ ಮಂಜೂರಾತಿ ನೀಡಲಾಗಿದೆ.
- ಅಂಗನವಾಡಿ ಮಕ್ಕಳ ಪೌಷ್ಠಿಕ ಆಹಾರ (ಐ.ಸಿ.ಡಿ.ಎಸ್) ಯೋಜನೆಯಡಿ ಒಟ್ಟು ರೂ.410.20 ಕೋಟಿ ವೆಚ್ಚದಲ್ಲಿ ಪ.ಜಾತಿಯ 10.90 ಲಕ್ಷ ಹಾಗೂ ಪ.ಪಂಗಡದ 9.67 ಲಕ್ಷ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ 14.75 ಲಕ್ಷ ಹಾಗೂ 6.28 ಲಕ್ಷ ಪರಿಶಿಷ್ಟ ಪಂಗಡದ ಜನರಿಗೆ ಸೌಲಭ್ಯ ಒದಗಿಸಲಾಗಿದೆ.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 11.27 | 11.23 | 100 |
| ಟಿ.ಎಸ್.ಪಿ | 2.76 | 2.19 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಾಲಿಕತ್ವ/ಸಂಪಾದಕತ್ವದ ಪತ್ರಿಕೆಗಳಿಗೆ ಜಾಹೀರಾತು ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಿರ್ಮಾಣ ಮತ್ತು ನಿರ್ದೇಶಿಸಿದ ಚಲನಚಿತ್ರಗಳಿಗೆ ರೂ.10.00 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.
- ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಪ್ರಚಾರ ಮಾಡಲಾಗಿದೆ.
- ಪತ್ರಿಕೋದ್ಯಮ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ.

## ಪ್ರವಾಸೋದ್ಯಮ ಇಲಾಖೆ:

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 20.18 | 20.17 | 100 |
| ಟಿ.ಎಸ್.ಪಿ | 8.41 | 8.40 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಜ್ಯದ ಸರ್ಕಾರಿ ಪ್ರೌಢಶಾಲೆಯ 14759 ಪರಿಶಿಷ್ಟ ಜಾತಿ ಹಾಗೂ 6784 ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಏರ್ಪಡಿಸಲಾಗಿದೆ.
- ರಾಜ್ಯದ 30 ಜಿಲ್ಲೆಯ ಅರ್ಹ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಪ್ರವಾಸಿ ಟ್ಯಾಕ್ಸಿ ಯೋಜನೆಯಡಿ ಸಹಾಯಧನ ರೂ.2.00 ಲಕ್ಷದಿಂದ ರೂ.3.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. 53 ಟ್ಯಾಕ್ಸಿಗಳನ್ನು ಪರಿಶಿಷ್ಟ ಜಾತಿ ಮತ್ತು 15 ಟ್ಯಾಕ್ಸಿಗಳನ್ನು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 14812 ಪರಿಶಿಷ್ಟ ಜಾತಿ ಮತ್ತು 6828 ಪರಿಶಿಷ್ಟ ಪಂಗಡ ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 33.26 | 9.50 | 29 |
| ಟಿ.ಎಸ್.ಪಿ | 13.81 | 4.35 | 31 |

- ಒಟ್ಟು ಶೇ.30 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರಾಜ್ಯ/ರಾಷ್ಟ್ರ/ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ರೂ.1.00 ಲಕ್ಷದಿಂದ ರೂ.5.00 ವರೆಗೆ ಪ್ರೋತ್ಸಾಹಧನ ನೀಡಲಾಗಿದೆ.
- ಜಿಮ್ ಸ್ಥಾಪನೆ ಮಾಡಲು ಸಲಕರಣೆ ಖರೀದಿಗೆ ಸಹಾಯಧನ ನೀಡಲಾಗಿದೆ.
- ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ವಸತಿ ಶಾಲೆಗಳಿಗೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಸಾಮಗ್ರಿಗಳ ಸರಬರಾಜು ಮಾಡಲಾಗಿದೆ.
- ರಾಜ್ಯ/ರಾಷ್ಟ್ರ/ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ/ಕ್ರೀಡಾ ಸಲಕರಣೆ/ಪ್ರಯಾಣ ಭತ್ಯೆ/ ದಿನ ಭತ್ಯೆಗಳನ್ನು ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವಕ-ಯುವತಿಯವರಿಗೆ ಕ್ರೀಡಾ ಕೌಶಲ್ಯ ತರಬೇತಿ ನೀಡಲಾಗಿದೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 1095 ಪರಿಶಿಷ್ಟ ಜಾತಿ ಮತ್ತು 368 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 589.69 | 432.68 | 73 |
| ಟಿ.ಎಸ್.ಪಿ | 264.89 | 191.87 | 72 |

- ಒಟ್ಟು ಶೇ.72 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಅನ್ನಭಾಗ್ಯ ಯೋಜನೆಯಡಿಯಲ್ಲಿ ಬಿ.ಪಿ.ಎಲ್ ಕುಟುಂಬಗಳಿಗೆ ಆಹಾರ ಧಾನ್ಯಗಳ ಸರಬರಾಜಿಗೆ ಸಹಾಯಧನ ನೀಡಲಾಗಿದೆ.

## ಕಂದಾಯ ಇಲಾಖೆ (ಸಾಮಾಜಿಕ ಭದ್ರತೆ)

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 770.08 | 761.84 | 99 |
| ಟಿ.ಎಸ್.ಪಿ | 413.13 | 411.73 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಡತನ ರೇಖೆಗಿಂತ ಕೆಳಗಿರುವ, ವಯಸ್ಸಾದ ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಹಾಗೂ ವಿಕಲಚೇತನರಿಗೆ ಮಾಸಿಕ ಪಿಂಚಣಿ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ 18 ರಿಂದ 59 ವರ್ಷ ವಯೋಮಿತಿಯ ದುಡಿಯುವ ಕುಟುಂಬದ ಮುಖ್ಯಸ್ಥ ಮರಣ ಹೊಂದಿದಲ್ಲಿ 20 ಸಾವಿರ ರೂ ಧನ ಸಹಾಯ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ತಲಾ ರೂ.5000/- ಧನ ಸಹಾಯ ನೀಡಲಾಗಿದೆ.
- ಶ್ರೀ ಸಾಮಾನ್ಯ ವಿಮಾ ಯೋಜನೆಯಡಿ 18 ರಿಂದ 59 ವರ್ಷ ವಯೋಮಿತಿಯ ಬಡತನ ರೇಖೆಗಿಂತ ಕೆಳಗಿರುವ 72 ವಿವಿಧ ಕಸುಬುಗಳಡಿ ಬರುವ ಕುಟುಂಬಗಳಿಗೆ ವಿಮಾ ಸುರಕ್ಷಾ ಸೌಲಭ್ಯ ಒದಗಿಸಲಾಗಿದೆ.
- ಆರಾಧನಾ ಯೋಜನೆಯಡಿ ರೂ.20.00 ಕೋಟಿ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ದೇವಾಲಯ ನಿರ್ಮಾಣ/ಜೀರ್ಣೋದ್ಧಾರ ಕಾರ್ಯಕ್ರಮಗಳಿಗಾಗಿ ಬಳಸಲಾಗಿದೆ.

ಕಂದಾಯ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಲಕ್ಷ ಪರಿಶಿಷ್ಟ ಜಾತಿ 16.83 ಲಕ್ಷ ಮತ್ತು 8.16 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 8.41 | 8.41 | 100 |
| ಟಿ.ಎಸ್.ಪಿ | 3.36 | 3.36 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- 1530 ಪ.ಜಾತಿ/ಪ.ಪಂಗಡದ ಪದವೀಧರ/ಡಿಪ್ಲೊಮ ಅಭ್ಯರ್ಥಿಗಳಗೆ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಕಂಪ್ಯೂಟರ್ ಆನಿಮೇಷನ್ ತರಬೇತಿ ನೀಡಲಾಗಿದೆ.

## ವಸತಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1746.42 | 1640.52 | 94 |
| ಟಿ.ಎಸ್.ಪಿ | 587.41 | 523.29 | 89 |

- ಒಟ್ಟು ಶೇ. 92 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಆಶ್ರಯ, ಬಸವ ವಸತಿ, ವಾಜಪೇಯಿ ನಗರ ವಸತಿ, ಇಂದಿರಾ ಆವಾಸ್/ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಗ್ರಾಮೀಣ/ನಗರ ಪ್ರದೇಶದಲ್ಲಿ ಮತ್ತು ಡಾ:.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಘಟಕ ವೆಚ್ಚ ಗ್ರಾಮೀಣ ಪ್ರದೇಶಗಳಲ್ಲಿ ರೂ. 1.75 ಲಕ್ಷ ಹಾಗೂ ನಗರ ಪ್ರದೇಶಗಳಲ್ಲಿ ರೂ.2.00 ಲಕ್ಷ ನಿಗದಿಪಡಿಸಲಾಗಿದೆ.
- ವಸತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 116369 ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು 51571 ಮನೆಗಳನ್ನು ಪರಿಶಿಷ್ಟ ಪಂಗಡ ಫಲಾನುಭವಿಗಳಗೆ ನಿರ್ಮಿಸಲಾಗಿದೆ.
- ಪ.ಜಾತಿ/ಪ.ಪಂಗಡದ ಕೊಳಗೇರಿಗಳಲ್ಲಿ ರೂ.57.51 ಕೋಟಿ ವೆಚ್ಚದಲ್ಲಿ 223 ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗಿದೆ.

## ಉನ್ನತ ಶಿಕ್ಷಣ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 146.41 | 109.74 | 75 |
| ಟಿ.ಎಸ್.ಪಿ | 50.32 | 35.10 | 70 |

- ಒಟ್ಟು ಶೇ.72 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಶಿಕ್ಷಣ ಗುಣಮಟ್ಟ ಸುಧಾರಿಸಲು ಇಂಜಿನಿಯರಿಂಗ್ ಕಾಲೇಜುಗಳಗೆ ಉಪಕರಣಗಳನ್ನು ಒದಗಿಸಲಾಗಿದೆ.
- ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷ ಒಳಗಿರುವ ಇಂಜಿನಿಯರಿಂಗ್ ವಿದ್ಯಾರ್ಥಿಗಳಗೆ ಶುಲ್ಕ ಮರುಪಾವತಿಸಲಾಗಿದೆ.
- ಪಿ.ಹೆಚ್.ಡಿ. ವಿದ್ಯಾರ್ಥಿಗಳಗೆ ಸ್ಟೈಪೆಂಡ್ ನೀಡಲಾಗಿದೆ.
- ವಿಶ್ವವಿದ್ಯಾಲಯಗಳಗೆ ನೀಡಲಾಗುವ ಅನುದಾನದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಗೆ ಹೆಚ್ಚುವರಿಯಾಗಿ ಭೋಜನಾ ವೆಚ್ಚವನ್ನು ಭರಿಸಲಾಗಿದೆ.
- ವಿಜ್ಞಾನ ಕೋರ್ಸ್‌ಗಳಗೆ ಪ್ರವೇಶ ಪಡೆದ ಪ್ರತಿಭಾವಂತ ಪದವಿ ವಿದ್ಯಾರ್ಥಿಗಳಗೆ ವಿದ್ಯಾರ್ಥಿ ವೇತನ ನೀಡಲಾಗಿದೆ.

- ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.
- RUSA ಕಾರ್ಯಕ್ರಮದಡಿ ರೂ.34.00 ಕೋಟಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

## ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 705.31 | 653.08 | 93 |
| ಟಿ.ಎಸ್.ಪಿ | 270.49 | 249..91 | 92 |

- ಒಟ್ಟು ಶೇ.92 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ವಿದ್ಯಾ ವಿಕಾಸ ಯೋಜನೆಯಡಿ ರೂ.124.16 ಕೋಟಿ ವೆಚ್ಚದಲ್ಲಿ 16.65 ಲಕ್ಷ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಪಠ್ಯ ಪುಸ್ತಕ, ಸಮವಸ್ತ್ರ ಶೂ ಒದಗಿಸಲಾಗಿದೆ.
- 8ನೇ ತರಗತಿ 1.84 ಲಕ್ಷ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ ಮಾಡಲಾಗಿದೆ.
- ಅಕ್ಷರ ದಾಸೋಹದಡಿ ಬಿಸಿಊಟಕ್ಕಾಗಿ ರೂ.350.20 ಕೋಟಿ ವೆಚ್ಚ ಭರಿಸಲಾಗಿದೆ.
- ಎಸ್.ಎಸ್.ಎಲ್.ಸಿ./ಪಿ.ಯು.ಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಸರ್ಕಾರದಿಂದ ಭರಿಸಲಾಗಿದೆ.
- ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 14.66 ಲಕ್ಷ ವಿದ್ಯಾರ್ಥಿಗಳಿಗೆ ರೂ.110.00 ಕೋಟಿ ವೆಚ್ಚದಲ್ಲಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ.
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ಶಿಕ್ಷಣ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮದಡಿ 2.36 ಲಕ್ಷ ವಿದ್ಯಾರ್ಥಿಗಳಿಗೆ ರೂ.37.00 ಕೋಟಿ ವೆಚ್ಚ ಮಾಡಲಾಗಿದೆ.
- ಮೀಸಲು ಕ್ಷೇತ್ರಗಳಲ್ಲಿ ಶಾಲಾ ಕಟ್ಟಡ ದುರಸ್ತಿ ಮಾಡಲಾಗಿದೆ.
- ಮಾಧ್ಯಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತಾ ಜಾಗೃತಿ ಮೂಡಿಸಲಾಗಿದೆ.
- ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ 27214 ವಿದ್ಯಾರ್ಥಿಗಳಿಗೆ ರೂ.105.00 ಕೋಟಿ ಮೊತ್ತದ ಶುಲ್ಕ ಮರುಪಾವತಿಸಲಾಗಿದೆ.

## ಕೈಮಗ್ಗ ಮತ್ತು ಜವಳಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 38.47 | 38.47 | 100 |
| ಟಿ.ಎಸ್.ಪಿ | 15.81 | 15.81 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೇಕಾರರಿಗೆ ವಸತಿ ಕಾರ್ಯಾಗಾರ ನಿರ್ಮಿಸಿಲು ಘಟಕ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ ರೂ.3.00 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.3.25 ಲಕ್ಷ ನಿಗದಿಪಡಿಸಿದ್ದು ಸದರಿ ಮೊತ್ತದಲ್ಲಿ ಶೇ.90 ಸಹಾಯಧನ ಹಾಗೂ ಶೇ. 10 ಫಲಾನುಭವಿಗಳ ವಂತಿಕೆಯಿಂದ ಭರಿಸಲಾಗಿದೆ.

- ನೇಕಾರರಿಗೆ ರೂ.30000/- ಘಟಕ ವೆಚ್ಚದಲ್ಲಿ ಕೈಮಗ್ಗ ಹಾಗೂ ಸಲಕರಣೆಗಳ ಸರಬರಾಜು ಮಾಡಲಾಗಿದೆ.
- ವಿದ್ಯುತ್ ಮಗ್ಗಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸ್ಥಾಪಿಸುವ ಸಿದ್ಧ ಉಡುಪು ಘಟಕಗಳಿಗೆ ಸಹಾಯಧನ ನೀಡಲಾಗಿದೆ.

ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವಿವಿಧ ಕಾರ್ಯಕ್ರಮಗಳಲ್ಲಿ 4029 ಪರಿಶಿಷ್ಟ ಜಾತಿ ಮತ್ತು 1917 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 147.87 | 146.25 | 99 |
| ಟಿ.ಎಸ್.ಪಿ | 43.43 | 43.14 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕೆ.ಐ.ಎ.ಡಿ.ಬಿ ಮೂಲಕ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನವನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗಿದೆ.
- ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕೈಗಾರಿಕಾ ಶೆಡ್‌ಗಳಿಗೆ ಶೇ.50 ರಷ್ಟು ರಿಯಾಯಿತಿ ನೀಡಲಾಗಿದೆ.

ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 351 ಪರಿಶಿಷ್ಟ ಜಾತಿ ಮತ್ತು 284 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಣ್ಣ ಕೈಗಾರಿಕೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 8.83 | 7.96 | 90 |
| ಟಿ.ಎಸ್.ಪಿ | 3.77 | 3.28 | 87 |

- ಒಟ್ಟು ಶೇ.89 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆ ಘಟಕಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಒಂದು ಯುನಿಟ್ ಗೆ ರೂ.2/- ಸಹಾಯಧನ ನೀಡಲಾಗಿದೆ.
- ಕುಶಲಕರ್ಮಿಗಳಿಗೆ ಟೂಲ್ ಕಿಟ್ ನೀಡಲಾಗಿದೆ.

ಸಣ್ಣ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 2202 ಪರಿಶಿಷ್ಟ ಜಾತಿ ಮತ್ತು 923 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ನಗರಾಭಿವೃದ್ಧಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 806.02 | 715.08 | 89 |
| ಟಿ.ಎಸ್.ಪಿ | 348.25 | 308.57 | 89 |

- ಒಟ್ಟು ಶೇ.89 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಗರ ಪ್ರದೇಶಗಳಲ್ಲಿ ಪ.ಜಾತಿ/ಪ.ಪಂಗಡದ ಜನರಿಗೆ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡಲಾಗಿದೆ.
- ನಗರ ಸ್ಥಳೀಯ ಸಂಸ್ಥೆಗಳಿಂದ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಜನವಸತಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ.
- ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡಲಾಗಿದೆ.
- ಖಾಯಂ ಪೌರಕಾರ್ಮಿಕರಿಗೆ ವಸತಿ ಯೋಜನೆಯಡಿ ತಲಾ ರೂ.6.00 ಲಕ್ಷದಂತೆ 1677 ಪ.ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

## ಲೋಕೋಪಯೋಗಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 884.07 | 790.15 | 89 |
| ಟಿ.ಎಸ್.ಪಿ | 419.49 | 395.29 | 94 |

- ಒಟ್ಟು ಶೇ.92 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಒಟ್ಟು ರೂ.1185.44 ಕೋಟಿ ವೆಚ್ಚದಲ್ಲಿ 1820 ಕಿ.ಮೀ ಸಿ.ಸಿ.ರಸ್ತೆ/ಸಂಪರ್ಕ ರಸ್ತೆ ಮತ್ತು ಚರಂಡಿ ನಿರ್ಮಿಸಲಾಗಿದೆ.

## ಭಾರಿ ನೀರಾವರಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1908.93 | 11908.93 | 100 |
| ಟಿ.ಎಸ್.ಪಿ | 801.99 | 801.99 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕೃಷ್ಣಭಾಗ್ಯ ಜಲನಿಗಮ, ಕರ್ನಾಟಕ ನೀರಾವರಿ ನಿಗಮ, ವಿಶ್ವೇಶ್ವರಯ್ಯ ಜಲನಿಗಮ ಮತ್ತು ಕೃಷ್ಣ ಮೇಲ್ದಂಡ ಯೋಜನೆ- ಎ.ಐ.ಬಿ.ಪಿ, ಕಾಡಾ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.
- ಸದರಿ ನಿಗಮಗಳ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಹೊಂದಿರುವ ಜಮೀನುಗಳಿಗೆ ನೀರಾವರಿ ಸೌಲಭ್ಯಗಳಾದ ಕಾಲುವೆಗಳು, ಏತ ನೀರಾವರಿ, ತೆರೆದಬಾವಿ, ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಲಭ್ಯ ಒದಗಿಸಲಾಗಿದೆ.
- ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಲ್ಲಿ ರಸ್ತೆ, ಸಮುದಾಯ ಭವನ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

## ಸಣ್ಣ ನೀರಾವರಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 263.82 | 260.90 | 99 |
| ಟಿ.ಎಸ್.ಪಿ | 116.10 | 108.84 | 94 |

- ಒಟ್ಟು ಶೇ.96 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರ ಜಮೀನುಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕವಾಗಿ ನೀರಾವರಿ ಸೌಲಭ್ಯ ಕಲ್ಪಿಸಲು ಏತ ನೀರಾವರಿ, ತೆರೆದ ಬಾವಿ, ಕೊಳವೆ ಬಾವಿ ಹಾಗೂ ಅಂತರ್ಜಲ ವೃದ್ಧಿಸಲು ಚೆಕ್‌ಡ್ಯಾಂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟು 4338 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

## ವೈದ್ಯಕೀಯ ಶಿಕ್ಷಣ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 64.38 | 64.38 | 100 |
| ಟಿ.ಎಸ್.ಪಿ | 12.62 | 12.62 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಮತ್ತಿತರ ಉನ್ನತ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೋಗಿಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಗಾಗಿ ತಗಲುವ ಪೂರ್ಣ ವೆಚ್ಚ ಸರ್ಕಾರದಿಂದ ಭರಿಸಲಾಗುತ್ತಿದೆ
- ವೈದ್ಯಕೀಯ ಮತ್ತು ದಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ಟೆತಸ್ಕೋಪ್/ಏಪ್ರಾನ್/ಬಿ.ಪಿ. ಪರೀಕ್ಷೆ ಉಪಕರಣ, ಪಠ್ಯ ಪುಸ್ತಕ, ಆಕರ ಪುಸ್ತಕಗಳನ್ನು ಉಚಿತವಾಗಿ ಒದಗಿಸಲಾಗಿದೆ.

- ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷದವರೆಗೆ ಇರುವ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 35187 ಪರಿಶಿಷ್ಟ ಜಾತಿ ಮತ್ತು 7250 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 653.61 | 575.20 | 88 |
| ಟಿ.ಎಸ್.ಪಿ | 264.57 | 222.56 | 84 |

- ಒಟ್ಟು ಶೇ.86 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಜನನಿ ಸುರಕ್ಷಾ ಯೋಜನೆ, ರೋಗನಿರೋಧಕ ಲಸಿಕಾ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ ಮತ್ತು ಸಂಚಾರಿ ಆರೋಗ್ಯ ಘಟಕಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.
- ಶುಚಿ ಯೋಜನೆಯಡಿ ಒಟ್ಟು 8.78 ಲಕ್ಷ ಮಹಿಳೆಯರಿಗೆ ಸ್ಯಾನಿಟರಿ ಕಿಟ್‌ಗಳನ್ನು ನೀಡಲಾಗಿದೆ.
- ಆರೋಗ್ಯ ಕವಚ 108 ರಡಿ 1.80 ಲಕ್ಷ ಜನರಿಗೆ ಆಂಬ್ಯುಲೆನ್ಸ್ ಸೇವೆ ಒದಗಿಸಲಾಗಿದೆ.
- ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ ಚಿಕಿತ್ಸಾ ಯೋಜನೆಯನ್ನು ಎಲ್ಲಾ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಈ ಯೋಜನೆಯಡಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟ ಗಾಯಗಳು, ಪಾಲಿಟ್ರಾಮಾ ಇತ್ಯಾದಿ ಶಸ್ತ್ರ ಚಿಕಿತ್ಸೆಗಳಿಗೆ 1.50 ಲಕ್ಷ ದಿಂದ 2 ಲಕ್ಷದವರೆಗೆ ನಿಗದಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗಿದೆ.
- ಡಯಾಲಿಸಿಸ್ ಘಟಕಗಳನ್ನು ಮತ್ತು ಸುಟ್ಟ ಗಾಯಗಳ ಚಿಕಿತ್ಸಾ ಘಟಕಗಳ ಸ್ಥಾಪನೆ ಮಾಡಲಾಗಿದೆ.
- ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಸ್ಥಳಗಳಲ್ಲಿ ಉಚಿತ ಆರೋಗ್ಯ ತಪಾಸಣೆ, ಸೂಕ್ತ ಔಷಧಿ ವಿತರಣೆ, ಆರೋಗ್ಯ ಸಂಸ್ಥೆಗಳನ್ನು ಉನ್ನತೀಕರಿಸಿ, ಉಪಕರಣಗಳನ್ನು ಒದಗಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗ ಜನಾಂಗದ ಆರೋಗ್ಯ ಸುಧಾರಣೆಗೆ ವಿಶೇಷ ಯೋಜನೆ ರೂಪಿಸಲಾಗಿದೆ.
- ಭಾರತೀಯ ವೈದ್ಯ ಪದ್ಧತಿಯಲ್ಲಿ ಬರುವ ಆಯುಷ್ ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸಾ ಇವುಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ನೀಡಲಾಗುತ್ತಿದೆ.
- ಜನನಿ ಸುರಕ್ಷಾ ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ 100 ಹೆರಿಗೆಗೆ ರೂ.3.00 ಲಕ್ಷ ಆರ್ಥಿಕ ಸಹಾಯ ಮತ್ತು ಹೆರಿಗೆ ಭತ್ಯೆ ರೂ.1000/- ದಂತೆ ನೀಡಲಾಗಿದೆ.
- ಮೀಸಲು ಕ್ಷೇತ್ರಗಳಲ್ಲಿ ಆಸ್ಪತ್ರೆ ಕಟ್ಟಡಗಳ ದುರಸ್ತಿ/ಉನ್ನತೀಕರಣ ಕಾಮಗಾರಿ ಅನುಷ್ಠಾನ ಮಾಡಲಾಗಿದೆ.
- ತಾಯಿಭಾಗ್ಯ ಯೋಜನೆಯಡಿ ಮಡಿಲು ಕಿಟ್ ವಿತರಣೆ ಹಾಗೂ ಗರ್ಭಿಣಿ ಮಹಿಳೆಯರಿಗೆ ಪೌಷ್ಠಿಕಾಂಶಗಳ ನೆರವು ಪಡೆಯಲು ರೂ.2000/- ಧನಸಹಾಯ ನೀಡಲಾಗಿದೆ.

**ಕಾರ್ಮಿಕ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 26.92 | 26.92 | 100 |
| ಟಿ.ಎಸ್.ಪಿ | 20.72 | 20.72 | 100 |

- ಒಟ್ಟು ಶೇ. 100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಆಶಾದೀಪ ಕಾರ್ಯಕ್ರಮದಡಿ ಖಾಸಗಿ ಸಂಸ್ಥೆಗಳಲ್ಲಿ ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲು ಪ್ರೋತ್ಸಾಹಿಸಲು ಪಿ.ಎಫ್ ಮತ್ತು ಇ.ಎಸ್.ಐ ಮೊತ್ತವನ್ನು ಸರ್ಕಾರದಿಂದ ಭರಿಸಲಾಗುವುದು.
- ಪ.ಜಾತಿ/ಪ.ಪಂಗಡದ 5616 ಬಾಲಕಾರ್ಮಿಕರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ.

**ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ತರಬೇತಿ ಇಲಾಖೆ:**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 143.24 | 80.46 | 56 |
| ಟಿ.ಎಸ್.ಪಿ | 96.48 | 36.93 | 35 |

- ಒಟ್ಟು ಶೇ. 46 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು :**

- 26437 ಪರಿಶಿಷ್ಟ ಜಾತಿ, 11116 ಪರಿಶಿಷ್ಟ ಪಂಗಡದ ಐಟಿಐ ವಿದ್ಯಾರ್ಥಿಗಳಿಗೆ ಟೂಲ್ ಕಿಟ್, ಸಮವಸ್ತ್ರ, ಶೂ, ಪುಸ್ತಕಗಳು, ಬ್ಯಾಗ್, ಟ್ಯಾಬ್ಸ್, ತಾಂತ್ರಿಕ ಪಠ್ಯ ಪುಸ್ತಕಗಳ ಸರಬರಾಜು ಮಾಡಲಾಗಿದೆ.
- ಪ.ಜಾತಿ/ಪ.ಪಂಗಡದ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿದೆ.
- ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಪ.ಜಾತಿ 27231 ಮತ್ತು 836 ಪ.ಪಂಗಡದ ಜನರಿಗೆ ತರಬೇತಿ ನೀಡಲಾಗಿದೆ.

**ಇಂಧನ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 661.89 | 657.53 | 99 |
| ಟಿ.ಎಸ್.ಪಿ | 269.89 | 268.12 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿ ಕೊರೆದ 14870 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಪಂಪ್‌ಸೆಟ್‌ಗಳಿಗೆ 10 ಹೆಚ್.ಪಿ ವರೆಗೆ ಉಚಿತ ವಿದ್ಯುತ್ ಸರಬರಾಜು ಮಾಡಲಾಗಿದೆ.
- ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಿ.ಪಿ.ಎಲ್. ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆ.
- ಮೇಲ್ಕಂಡ ಕಾರ್ಯಕ್ರಮಗಳಿಗೆ ಒದಗಿಸಿದ ಅನುದಾನದವನ್ನು ಸಹಾಯಧನವೆಂದು ಪರಿಗಣಿಸಲಾಗುತ್ತಿದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 39.63 | 37.13 | 95 |
| ಟಿ.ಎಸ್.ಪಿ | 16.09 | 15.49 | 94 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲಾವಿದರಿಗೆ ಪ್ರೋತ್ಸಾಹಧನ ನೀಡಲಾಗಿದೆ.
- ಪ.ಜಾತಿ/ಪ.ಪಂಗಡ ಸಾಂಸ್ಕೃತಿಕ ಸಂಘಗಳಿಗೆ ಧನಸಹಾಯ ನೀಡಲಾಗಿದೆ.
- ಜನಪದ ಉತ್ಸವ ಮತ್ತು ಕಲಾ ಶಿಬಿರಗಳನ್ನು ಏರ್ಪಡಿಸಲಾಗಿದೆ.
- ಬಯಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
- ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಧನ ಸಹಾಯ ನೀಡಲಾಗಿದೆ.
- ರಾಜ್ಯ ಪತ್ರಾಗಾರ ಘಟಕಕ್ಕೆ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪಿ.ಹೆಚ್.ಡಿ ಇತಿಹಾಸ ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಾಗಾರ/ವಿಚಾರ ಸಂಕಿರಣ ಏರ್ಪಡಿಸಲಾಗಿದೆ ಹಾಗೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ/ ಗೌರವಧನ ನೀಡಲಾಗಿದೆ.
- ಡಾ:.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಡಿಬೇಟ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಮುದ್ರಿಸಲಾಗುತ್ತಿದೆ.

## ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 296.18 | 295.48 | 100 |
| ಟಿ.ಎಸ್.ಪಿ | 140.42 | 139.81 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಅಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ/ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ, ಸಮುದಾಯ ಭವನ ನಿರ್ಮಾಣ, ಸಂಪರ್ಕ ರಸ್ತೆ, ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಕೆ, ಅಂಗನವಾಡಿ ಕೇಂದ್ರ ನಿರ್ಮಾಣ, ಶಾಲೆಗಳಿಗೆ ಕಟ್ಟಡ,

ವಿದ್ಯಾರ್ಥಿನಿಲಯಗಳಲ್ಲಿ/ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ನೀಡಲಾಗುತ್ತಿದೆ.

- ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಯೋಜನೆಯಡಿ 725 ಕಾಮಗಾರಿಗಳನ್ನು ಪೂರ್ಣಗೊಳಸಲಾಗಿದೆ.

**ಕಾನೂನು ಇಲಾಖೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1.28 | 1.28 | 100 |
| ಟಿ.ಎಸ್.ಪಿ | 0.58 | 0.58 | 100 |

- ಒಟ್ಟು ಶೇ.100 ರಷ್ಟು ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- 414 ಕಾನೂನು ವಿದ್ಯಾರ್ಥಿಗಳಗೆ ಲ್ಯಾಪ್‌ಟಾಪ್ ವಿತರಿಸಲಾಗಿದೆ.

**ಸಮಾಜ ಕಲ್ಯಾಣ ಇಲಾಖೆ: ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳು :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 4864.21 | 4634.40 | 95 |
| ಟಿ.ಎಸ್.ಪಿ | 1588.53 | 1502.43 | 96 |

- ಒಟ್ಟು ಶೇ.95 ಅನುದಾನ ವೆಚ್ಚಮಾಡಲಾಗಿದೆ.

**ಮುಖ್ಯ ಕಾರ್ಯಕ್ರಮಗಳು :**

- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ-ಪ.ಜಾತಿ ವಿದ್ಯಾರ್ಥಿಗಳಗೆ 1867 ವಿದ್ಯಾರ್ಥಿನಿಲಯಗಳನ್ನು ಮತ್ತು ಪ.ಪಂ ವಿದ್ಯಾರ್ಥಿಗಳಗೆ 374 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ 1.86 ಲಕ್ಷ ವಿದ್ಯಾರ್ಥಿಗಳಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಗೆ ಮಾಹೆಯಾನ ಭೋಜನಾ ವೆಚ್ಚಕ್ಕಾಗಿ ರೂ. 1400/- ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಗೆ ರೂ.1500/- ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿಗಳಗೆ ರೂ.1500/- ಗಳನ್ನು ನೀಡಲಾಗುತ್ತಿದೆ.
- ವಿದ್ಯಾರ್ಥಿ ನಿಲಯಗಳಲ್ಲಿ ಇಲ್ಲದೇ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಗೆ ತರಗತಿ ಆಧಾರದಲ್ಲಿ ವಾರ್ಷಿಕ ರೂ.1000/- ರಿಂದ ರೂ.1350/- ಡೇ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ. 8.50 ಲಕ್ಷ ಪ.ಜಾತಿ ವಿದ್ಯಾರ್ಥಿಗಳಗೆ ಒಟ್ಟು ರೂ.155.63 ಕೋಟಿ ವೆಚ್ಚದಲ್ಲಿ ಮತ್ತು 3.22 ಲಕ್ಷ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಗೆ ರೂ.29.74 ಕೋಟಿ ವೆಚ್ಚದಲ್ಲಿ ಸ್ಕಾಲರ್‌ಶಿಪ್ ನೀಡಲಾಗಿದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿಗಳಗೆ ವಿದ್ಯಾರ್ಥಿವೇತನ – 3.09 ಲಕ್ಷ ಪ.ಜಾತಿ ವಿದ್ಯಾರ್ಥಿಗಳಗೆ ರೂ.359.06 ಕೋಟಿ ಪರಿಶಿಷ್ಟ ಪಂಗಡ 1.01 ಲಕ್ಷ ವಿದ್ಯಾರ್ಥಿಗಳಗೆ ರೂ.106.91 ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವತಿಯಿಂದ 653 ವಸತಿ ಶಾಲೆಗಳನ್ನು ಪ.ಜಾತಿ/ಪ.ಪಂ ವಿದ್ಯಾರ್ಥಿಗಳಗಾಗಿ ನಿರ್ವಹಿಸಲಾಗುತ್ತಿದೆ. 93686 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.

- ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪ.ಜಾತಿ 1.12 ಲಕ್ಷ ವಿದ್ಯಾರ್ಥಿಗಳಿಗೆ ರೂ.178.12 ಕೋಟಿ ಹಾಗೂ ಪರಿಶಿಷ್ಟ ಪಂಗಡ 34000 ವಿದ್ಯಾರ್ಥಿಗಳಿಗೆ ರೂ.59.36 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ.
- ಪ.ಜಾತಿ /ಪ.ಪಂಗಡದ 28 ಪದವೀಧರ ಅಭ್ಯರ್ಥಿಗಳನ್ನು ವಿದೇಶಿ ವಿಶ್ವವಿದ್ಯಾಲಯಗಳಿಗೆ ಉನ್ನತ ಶಿಕ್ಷಣಕ್ಕಾಗಿ ನಿಯೋಜಿಸಿ ಒಟ್ಟು ರೂ.10.04 ಕೋಟಿಗಳನ್ನು ವೆಚ್ಚ ಭರಿಸಲಾಗಿದೆ.

## II ಮೂಲಭೂತ ಸೌಕರ್ಯಗಳು

- ಪರಿಶಿಷ್ಟ ಜಾತಿ/ ಪ.ಪಂಗಡದ ಕಾಲೋನಿಗಳಲ್ಲಿ ಸಮುದಾಯ ಭವನಗಳ ನಿರ್ಮಾಣ- ರೂ.125.23 ಕೋಟಿ ಅನುದಾನದಲ್ಲಿ 1608 ಪ.ಜಾತಿ ಸಮುದಾಯ ಭವನಗಳು ಹಾಗೂ ರೂ.50.00 ಕೋಟಿ ಅನುದಾನದಲ್ಲಿ 565 ಪ.ಪಂಗಡ ಸಮುದಾಯ ಭವನಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.
- ಪರಿಶಿಷ್ಟ ಜಾತಿಯ/ಪ.ಪಂಗಡದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಿಗೆ ರೂ.224.67 ಕೋಟಿ ಮೊತ್ತ ವಿನಿಯೋಗಿಸಲಾಗಿದೆ.
- ಪ.ಜಾತಿ/ಪ.ಪಂಗಡದ 69 ವಿದ್ಯಾರ್ಥಿನಿಲಯಗಳ ಕಟ್ಟಡಗಳಿಗೆ ರೂ.216.13 ವೆಚ್ಚ ಮಾಡಲಾಗಿದೆ. 435 ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ರೂ.139.25 ಕೋಟಿ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ.

## III ತರಬೇತಿ ಕಾರ್ಯಕ್ರಮ

- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ – 3815 ಅಭ್ಯರ್ಥಿಗಳಿಗೆ ತರಬೇತಿ ನೀಡಲು ರೂ.36.99 ಕೋಟಿ ವೆಚ್ಚ ಭರಿಸಲಾಗಿದೆ.

## IV. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಧನ

- 4353 ಅಂತರ್‌ಜಾತಿ ವಿವಾಹವಾದ ಪರಿಶಿಷ್ಟ ಜಾತಿ ದಂಪತಿಗಳಿಗೆ ರೂ.43.47 ಕೋಟಿ ಪ್ರೋತ್ಸಾಹ ಧನ ನೀಡಲಾಗಿದೆ.
- ವಿಧವಾ ಮರು ವಿವಾಹಕ್ಕೆ ತಲಾ ರೂ.3.00 ಲಕ್ಷ ಮತ್ತು ಪ.ಜಾತಿ/ಪ.ಪಂಗಡಗಳ ಉಪ ಜಾತಿಗಳಲ್ಲಿ ಅಂತರ್ಜಾತಿ ವಿವಾಹಕ್ಕೆ ತಲಾ ರೂ.2.00 ಲಕ್ಷ ಪ್ರೋತ್ಸಾಹಧನವನ್ನು ನೀಡಲಾಗಿದೆ.

## V. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

- ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಶೇ.4 ಬಡ್ಡಿ ಸಹಾಯಧನ ಯೋಜನೆಯಡಿ 260 ಪ.ಜಾತಿ ಹಾಗೂ 83 ಪ.ಪಂಗಡ ಫಲಾನುಭವಿಗಳಿಗೆ ಒಟ್ಟು ರೂ.40.00 ಕೋಟಿ ಬಡ್ಡಿಸಹಾಯಧನ ನೀಡಲಾಗಿದೆ.
- ಭೂ ಒಡೆತನ ಯೋಜನೆಯಡಿಯಲ್ಲಿ ಪ.ಜಾತಿ/ಪ.ಪಂಗಡ ಭೂ ರಹಿತ ಕೃಷಿ ಕಾರ್ಮಿಕರಿಗೆ ಕೃಷಿ ಭೂಮಿಯನ್ನು ಖರೀದಿಸಿ ನೀಡಲಾಗುತ್ತಿದೆ – ಘಟಕ ವೆಚ್ಚವನ್ನು ರೂ.10.00 ಲಕ್ಷದಿಂದ ರೂ.15.00 ಲಕ್ಷಕ್ಕೆ ಹೆಚ್ಚಿಸಲಾಗಿದೆ (ಶೇ.50 ಸಾಲ ಮತ್ತು ಶೇ.50 ಸಹಾಯಧನ).
- ಗಂಗಾ ಕಲ್ಯಾಣ ಯೋಜನೆಯಡಿ ಘಟಕ ವೆಚ್ಚವನ್ನು ರೂ.2.50 ಲಕ್ಷದಿಂದ ರೂ.3.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಸದರಂತೆ ಸಹಾಯಧನವನ್ನು ರೂ.2.00 ಲಕ್ಷದಿಂದ ರೂ.2.50 ಲಕ್ಷಕ್ಕೆ ಹೆಚ್ಚಿಸಲಾಗಿದೆ.
- ಎಸ್.ಸಿ/ಎಸ್.ಟಿ ಕಾನೂನು ಪದವೀಧರರಿಗೆ ಮಾಹೆಯಾನ ಶಿಷ್ಯವೇತನ ರೂ.2000/- ದಿಂದ ರೂ.5000/- ಕ್ಕೆ ಹೆಚ್ಚಿಸಲಾಗಿದೆ.
- ಎಸ್.ಸಿ/ಎಸ್.ಟಿ ಉದ್ದಿಮೆದಾರರಿಗೆ ಕೆ.ಎಸ್.ಎಫ್.ಸಿ ಇಂದ ಸಾಲ ಪಡೆಯುವವರಿಗೆ ಸಮಾನಾಂತರ ಖಾತರಿ ಯೋಜನೆ ಆರಂಭಿಸಲು ಮಂಜೂರಾತಿ ನೀಡಲಾಗಿದೆ.
- ಅತಿ ಹಿಂದುಳಿದ ಜೇನುಕುರುಬ, ಕೊರಗ ಮತ್ತು ಇತರೆ ಅರಣ್ಯ, ಅರಣ್ಯ ಅಂಚಿನಲ್ಲಿರುವ ಪರಿಶಿಷ್ಟ ಪಂಗಡ ಜನರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ.200.00 ಕೋಟಿ ಕಾಯ್ದಿರಿಸಲಾಗಿದೆ.

- ಪ.ಜಾತಿ ಅಭ್ಯರ್ಥಿಗಳಿಗೆ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮತ್ತು ಪ.ಪಂಗಡ ಅಭ್ಯರ್ಥಿಗಳಿಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ಸಾಲ ಮನ್ನಾ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಭಾರತ ಸರ್ಕಾರದ ರಾಷ್ಟ್ರೀಯ ಪ.ಜಾತಿ/ಪ.ಪಂಗಡದ ಅಭಿವೃದ್ಧಿ ನಿಗಮಗಳಿಂದ ಪಡೆದ ಸಾಲದ ಮರುಪಾವತಿಗೆ ಉಪಯೋಗಿಸಲಾಗುತ್ತದೆ.
- ಷೇರು ಬಂಡವಾಳ ಅನುದಾನವನ್ನು ಫಲಾನುಭವಿಗಳಿಗೆ ಸಾಲ/ಅಂಚಿನ ಹಣ ನೀಡಲು ಉಪಯೋಗಿಸಲಾಗುತ್ತದೆ.
- ಸ್ವಯಂ ಉದ್ಯೋಗ ಕಾರ್ಯಕ್ರಮಗಳಲ್ಲಿ ಸಹಾಯಧನ ಗರಿಷ್ಠ ರೂ.5.00 ಲಕ್ಷವರೆಗೆ ನೀಡಲಾಗುತ್ತಿದ್ದು, ಮತ್ತು ಸಾಲವನ್ನು ಬ್ಯಾಂಕ್ ಮೂಲಕ ಪಡೆಯಲಾಗುತ್ತಿದೆ.

## ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಡಾ:.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪ.ಜಾತಿ ಫಲಾನುಭವಿಗಳಿಗೆ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದಿ ನಿಗಮದಿಂದ ಪ.ಪಂಗಡದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ನೀಡಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮ | ಹಂಚಿಕೆ | ವೆಚ್ಚ | ಭೌತಿಕ ಸಾಧನೆ |
|---|---|---|---|---|
| 1. | ಗಂಗಾ ಕಲ್ಯಾಣ | 329.29 | 329.29 | 13397 |
| 2. | ಸ್ವಯಂ ಉದ್ಯೋಗ | 239.00 | 239.00 | 38994 |
| 3. | ಸಾಲಮನ್ನ | 106.00 | 106.00 | – |
| 4. | ಕಿರು ಸಾಲ ಯೋಜನೆ | 27.00 | 27.00 | 11653 |
| 5 | ಷೇರು ಬಂಡವಾಳ | 90.00 | 45.90 | ಕೇಂದ್ರ ಸರ್ಕಾರದಿಂದ ರೂ.44.10 ಕೋಟಿ ಬಿಡುಗಡೆಯಾಗಿ ರುವುದಿಲ್ಲ |
| | **ಒಟ್ಟು** | **791.29** | **747.19 (95%)** | **64044** |

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮ | ಹಂಚಿಕೆ | ವೆಚ್ಚದ ಮೊತ್ತ | ಭೌತಿಕ ಸಾಧನೆ |
|---|---|---|---|---|
| 1 | ಗಂಗಾ ಕಲ್ಯಾಣ | 160.00 | 160.00 | 7085 |
| 2 | ಸ್ವಯಂ ಉದ್ಯೋಗ | 228.00 | 228.00 | 21289 |
| 3 | ಷೇರು ಬಂಡವಾಳ | 2.00 | 2.00 | – |
| 4 | ಕಿರು ಸಾಲ ಯೋಜನೆ | 8.00 | 8.00 | 5750 |
| | **ಒಟ್ಟು** | **398.00** | **398.00** | **34124** |

### ಡಾ: ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

ಮೇಲ್ಕಂಡ ನಿಗಮದಿಂದ ಚರ್ಮ ಕುಶಲಕರ್ಮಿಗರಿಗೆ ಸಾಲ ಸೌಲಭ್ಯ, ತರಬೇತಿ, ಟೂಲ್‌ಕಿಟ್, ಮಾರಾಟ ಕುಠೀರ ಮತ್ತು ಮನೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಸಲಾಗುತ್ತಿದೆ. ವಸತಿ ಮತ್ತು ಕಾರ್ಯಾಗಾರ ನಿರ್ಮಾಣ, ರಸ್ತೆ ಬದಿ ಕುಠೀರಗಳ ವಿತರಣೆ ತರಬೇತಿ ಕಾರ್ಯಕ್ರಮಗಳು ಇತ್ಯಾದಿಗಳಗೆ ರೂ.50.00 ಕೋಟಿ ಅನುದಾನ ಒದಗಿಸಲಾಗಿದೆ. 4738 ಚರ್ಮ ಕುಶಲ ಕರ್ಮಿಗಳಗೆ ಸೌಲಭ್ಯ ಒದಗಿಸಲಾಗಿದೆ.

### ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಿಂದ ಬಂಜಾರ ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

2017-18 ನೇ ಸಾಲಿನಲ್ಲಿ ಬಂಜಾರ ಸಮುದಾಯದ ಅಭಿವೃದ್ಧಿಗಾಗಿ ತಾಂಡ ಅಭಿವೃದ್ಧಿ ನಿಗಮಕ್ಕೆ ರೂ.90.00 ಕೋಟಿಗಳನ್ನು ನೀಡಲಾಗಿದೆ. ತಾಂಡಗಳಲ್ಲಿ 157 ಸೇವಾಲಾಲ್/ಬಂಜಾರ ಸಮುದಾಯ ಭವನಗಳನ್ನು, 313 ತಾಂಡಗಳಲ್ಲಿ ಸಿ.ಸಿ.ರಸ್ತೆ, ಚರಂಡಿ ಕಾಮಗಾರಿ, 34 ಸಂಪರ್ಕ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ-** ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಟಾನಗೊಳಸಲಾಗುತ್ತಿರುವ ಎಲ್ಲಾ ಯೋಜನೆಗಳನ್ನು ಕರ್ನಾಟಕ ಬೋವಿ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸಲಾಗಿದೆ. ಅದರೆ ಜೊತೆಗೆ 2017-18 ನೇ ಸಾಲಿನಲ್ಲಿ ಪ್ರತ್ಯೇಕವಾಗಿ ಒಟ್ಟು ರೂ.25.00 ಕೋಟಿಗಳನ್ನು ವಿವಿಧ ಕಾರ್ಯಕ್ರಮಗಳಗೆ ಒದಗಿಸಲಾಗಿದೆ.

**ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ** ನಿಗಮಮಕ್ಕೆ ರೂ.30.00 ಕೋಟಿ ಒದಗಿಸಲಾಗಿದೆ. ಸಫಾಯಿ ಕರ್ಮಾಚಾರಿಗಳಗೆ/ಅವರ ಅವಲಂಬಿತರಿಗೆ ಸ್ವಯಂ ಉದ್ಯೋಗಕ್ಕಾಗಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಟಾನಗೊಳಸಲಾಗುತ್ತಿರುವ ಯೋಜನೆಗಳನ್ನು ಅಳವಡಿಸಿಕೊಂಡು ಸೌಲಭ್ಯ ಒದಗಿಸಲಾಗುತ್ತಿದೆ.

*******